Vijaya Karnataka 2-2-14.

20 ಕ್ಕೂ ಹೆಚ್ಚು ಮಳಿಗೆಗಳು ಭಸ್ಮ

# ಕೆಆರ್‌ಪುರ ಮಾರುಕಟ್ಟೆಯಲ್ಲಿ ಬೆಂಕಿ

**ಬೆಂಗಳೂರು:** ಕೆ.ಆರ್. ಪುರ ಸಂತೆ ಬಳಿಯಲ್ಲಿರುವ ಮಾರುಕಟ್ಟೆಯಲ್ಲಿ ಶುಕ್ರವಾರ ತಡರಾತ್ರಿ ಬೆಂಕಿ ಕಾಣಿಸಿಕೊಂಡು ಸುಮಾರು 20 ಕ್ಕೂ ಹೆಚ್ಚು ಮಳಿಗೆಗಳಿಗೆ ಬೆಂಕಿ ತಗುಲಿದ್ದು, ಸುಮಾರು 20 ಲಕ್ಷ ರೂ. ಗೂ ಹೆಚ್ಚು ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.

ಮಾರುಕಟ್ಟೆಯಲ್ಲಿ ತಡರಾತ್ರಿ ಬೆಂಕಿ ಕಾಣಿಸಿಕೊಂಡಿದ್ದು, ಇದನ್ನು ಗಮನಿಸಿದ ಸ್ಥಳೀಯರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ನಾಲ್ಕು ವಾಹನಗಳಲ್ಲಿ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕದಳದ ಸಿಬ್ಬಂದಿ ಎರಡು ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲೇ ಹಣ್ಣು, ತರಕಾರಿ, ಮಾರುಕಟ್ಟೆಯಲ್ಲಿ ನಿಲ್ಲಿಸಿದ್ದ ಎರಡು ದ್ವಿಚಕ್ರವಾಹಗಳು, 20 ತಳ್ಳುವಗಾಡಿಗಳು ಹಾಗೂ ಎಲೆ ಶ್ರೀನಿವಾಸ್ ಎಂಬುವವರಿಗೆ ಸೇರಿದ ಸುಮಾರು 10 ಲಕ್ಷರೂ. ಮೌಲ್ಯದ ಅಡಿಕೆ ದಾಸ್ತಾನು ಸುಟ್ಟಿದೆ. ಅಡಿಕೆ ಮೇಲೆ ನಿಷೇಧ ಹೇರುವ ಸಾಧ್ಯತೆಯ ಹಿನ್ನೆಲೆಯಲ್ಲಿ ಅವರು ಅಡಿಕೆಯನ್ನು ಶೇಖರಿಸಿಟ್ಟಿದ್ದರು ಎನ್ನಲಾಗಿದೆ.

**ಕಿಡಿಗೇಡಿಗಳ ಕೃತ್ಯ ಶಂಕೆ ?:** ಮಾರುಕಟ್ಟೆಯಲ್ಲಿ ವಿದ್ಯುತ್ ಇಲ್ಲದ ಕಾರಣ ಯಾವುದೇ ಶಾರ್ಟ್‌ಸರ್ಕಿಟ್ ನಿಂದ ಈ ಅವಘಡ ಸಂಭವಿಸಿಲ್ಲ, ಕಿಡಿಗೇಡಿಗಳು ಈ ಕೃತ್ಯ ಎಸಗಿರಬಹುದೆಂದು ಸ್ಥಳೀಯರು ಶಂಕೆ ವ್ಯಕ್ತಪಡಿಸಿದ್ದಾರೆ.

ಮಾರುಕಟ್ಟೆ ಸ್ಥಳಕ್ಕೆ ಶಾಸಕ ಬೈರತಿ ಬಸವರಾಜ್, ಬಿಬಿಎಂಪಿಯ ಜಂಟಿ ಆಯುಕ್ತ ದೇವರಾಜ್ ಸೇರಿದಂತೆ ಇತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆಗೆ ಸಂಬಂಧಿಸಿದಂತೆ ಕೆ.ಆರ್. ಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



3/4/14 VIJAYA VANI

# ಕೆ.ಆರ್.ಪುರ ಸಂತೆ ಮಳಿಗೆಗಳಲ್ಲಿ ಬೆಂಕಿ

## ■ 20 ಲಕ್ಷ ರೂ. ಮೌಲ್ಯದ ವಸ್ತುಗಳಿಗೆ ಹಾನಿ ■ ಕಿಡಿಗೇಡಿಗಳ ಕೃತ್ಯ ಶಂಕೆ

**ಕೆ.ಆರ್.ಪುರ:** ಇತಿಹಾಸ ಪ್ರಸಿದ್ಧ ಕೆ.ಆರ್.ಪುರ ಸಂತೆಯ 25 ಮಳಿಗೆಗಳು ಶನಿವಾರ ನಸುಕಿನಲ್ಲಿ ಬೆಂಕಿಗೆ ಆಹುತಿಯಾಗಿವೆ.

2.5 ಎಕರೆ ವಿಸ್ತೀರ್ಣದ ಸಂತೆ ಆವರಣದಲ್ಲಿದ್ದ 20ಕ್ಕೂ ಅಧಿಕ ಕೈಗಾಡಿಗಳು, 25 ಮಳಿಗೆಗಳು, 2 ಬೈಕ್‌ಗಳು ಬೆಂಕಿ ತಗುಲಿ ಸಂಪೂರ್ಣ ಭಸ್ಮವಾಗಿವೆ. ಈ ಅನಾಹುತದಿಂದ 20 ಲಕ್ಷ ರೂ.ಗೂ ಅಧಿಕ ಮೌಲ್ಯದ ಹಣ್ಣು, ತರಕಾರಿ, ಅಡಕೆ, ಹೂ ಸೇರಿ ಇತರ ವಸ್ತುಗಳು ಹಾನಿಯಾಗಿವೆ.

**ಹೇಗಾಯಿತು ಘಟನೆ:** ಶುಕ್ರವಾರ ವ್ಯಾಪಾರ ಮುಗಿಸಿ ವರ್ತಕರು ಮಳಿಗೆ ಬಾಗಿಲು ಹಾಕಿ ಮನೆಗೆ ತೆರಳಿದ್ದರು. ಅಲ್ಲದೆ ಕೈಗಾಡಿಗಳನ್ನು ಸಂತೆ ಆವರಣದಲ್ಲಿ ನಿಲ್ಲಿಸಿದ್ದರು.

ಶನಿವಾರ ನಸುಕಿನಲ್ಲಿ ಮಳಿಗೆಯಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು ಎಲ್ಲ ಕಡೆ ವ್ಯಾಪಿಸಿತು. ಪಕ್ಕದಲ್ಲೇ ಇದ್ದ ಕೆಲವರು ಕೂಡಲೇ ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದರು. ಮೂರು ಅಗ್ನಿಶಾಮಕ ವಾಹನಗಳು ಸತತ 2 ತಾಸುಗಳ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದವು.

**ಬೆಂಕಿ ಹಚ್ಚಿರುವ ಶಂಕೆ:** ಸಂತೆ ಆವರಣದಲ್ಲಿರುವ ಮಳಿಗೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ. ಹೀಗಾಗಿ ವಿದ್ಯುತ್ ಶಾರ್ಟ್‌ಸರ್ಕ್ಯೂಟ್ ಆಗಿರುವ ಸಾಧ್ಯತೆಯಿಲ್ಲ. ಕಿಡಿಗೇಡಿಗಳೇ ಬೆಂಕಿ ಹಚ್ಚಿರಬೇಕು ಎಂದು ವ್ಯಾಪಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಬಿಬಿಎಂಪಿ ಜಂಟಿ ಆಯುಕ್ತ ದೇವರಾಜ್, ಶಾಸಕ ಬೈರತಿ ಬಸವರಾಜ್ ತೆರಳಿ ಪರಿಶೀಲಿಸಿದರು. ಕೆ.ಆರ್. ಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಕೆ.ಆರ್. ಪುರದ ಸಂತೆ ಆವರಣದ ಮಳಿಗೆಗಳಲ್ಲಿ ಉಂಟಾದ ಬೆಂಕಿ ಅವಘಡದಲ್ಲಿ ಸುಟ್ಟುಹೋಗಿರುವ ಪದಾರ್ಥಗಳು.